ದಿನಾಂಕಃ 28.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ :–

ದಾವೆಯನ್ನು ದಾಖಲು ಮಾಡಿದಾಗ ಖಾತೆ ನಂಬರ್ 691 , 692, 693, 694, 695, 696 ನ್ನು ಈಗ ಇ-ಸ್ವತ್ತು ತಂತ್ರಾಂಶದಲ್ಲಿ ಖಾತೆ ಬದಲಾವಣೆ ಮಾಡಿರುವುದನ್ನು ನಾಣು ನೋಡಿರುವುದಿಲ್ಲ. ಕಾಲೇಜು ಕಟ್ಟಡವಿರುವ ಸ್ವತ್ತನ್ನು 151600700200500470 ರಂತೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಇ ಸ್ವತ್ತಿನ ಖಾತೆ ಮಾಡುವಾಗ ನಗರ ಯೋಜನಾ ಪ್ರಾಧಿಕಾರದ ನಕ್ಷೆಯ ಅನುಮತಿಯನ್ನು ಪಡೆದಿದೆ ಎಂದರೆ ಸರಿಯಲ್ಲ. ಇ ಸ್ವತ್ತಿನ ಖಾತೆಯಂತೆ 9.7536 ಪೂರ್ವ ಪಶ್ಚಿಮ ಅದೇ ರೀತಿಯಾಗಿ ಉತ್ತರ ದಕ್ಷಿಣ 39.624 ಮೀಟರ್‌ಗಳಂತೆ ನಗರ ಯೋಜನ ಪ್ರಾಧಿಕಾರದ ಅನುಮೋದನೆಯನ್ನು ಪಡೆದುಕೊಂಡು ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು 29 * 151 ಅಡಿಗಳ ವಿಸ್ತೀರ್ಣಕ್ಕೆ ಭೂ ಪರಿವರ್ತನೆಯಾಗಿದ್ದು, ಆದರೆ ಪ್ರತಿವಾದಿಗಳು ಮೇಲೆ ಹೇಳಿದಂತಹ ವಿಸ್ತೀರ್ಣಕ್ಕೆ ಖಾತೆ ಮಾಡಿಸಿಕೊಂಡಿರುವುದಾಗಿ ಉತ್ತರಿಸುತ್ತಾರೆ. ನಮೂನೆ 9 ರ ರೀತ್ಯಾ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ನನ್ನ ಗಮನಕ್ಕೆ ಬಂದಿರುವುದಿಲ್ಲ.

ನಗರ ಯೋಜನ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಇ ಸ್ವತ್ತು ಖಾತೆಯಾಗಿರುವ ಕಾಲೇಜು ಕಟ್ಟಡದ ಪೂರ್ವಕ್ಕೆ ಸಂಸ್ಥೆಯ ಗಾರ್ಡನ್ ಮತ್ತು ಸಭಾಂಗಣ ಇರುತ್ತದೆ ಎಂದರೆ ಸರಿಯಲ್ಲ. ಕಾಲೇಜು ಕಟ್ಟಡದ ಪಶ್ಚಿಮಕ್ಕೆ ಸಂಸ್ಥೆಯ ವಿದ್ಯಾರ್ಥಿ ನಿಲಯ ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಸಂಸ್ಥೆಗೆ ಸೇರಿದಂತಹ ರಸ್ತೆ ಮತ್ತು ಜಾಗ ಇರುತ್ತದೆ

ಎಂದರೆ ಸರಿಯಲ್ಲ. ಅದೇ ರೀತಿಯಾಗಿ ದಕ್ಷಿಣಕ್ಕೆ ಸಂಸ್ಥೆಗೆ ಸೇರಿದಂತಹ ಉಳಿಕೆ ನಿವೇಶನ ಎಂದರೆ ಸರಿಯಲ್ಲ. ಕಾಲೇಜು ಕಟ್ಟಡ ಅನ್ಯ ಸಂಕ್ರಮಣವಾಗಿರುವ 4 ಗುಂಟೆ ಜಾಗದಲ್ಲಿರುತ್ತದೆ. ಭಾರತ್ ಯುನಿವರ್ಸಲ್ ಸೊಸೈಟಿಯವರು ಕಟ್ಟಿರುವ ಕಟ್ಟಡವನ್ನು 4 ಗುಂಟೆಗೂ ಅಧಿಕವಾಗಿ ಕಟ್ಟಲ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ಹೆಚ್ಚುವರಿಯಾಗಿ ಕಟ್ಟಿರುವ ಕಾಲೇಜು ಕಟ್ಟಡವನ್ನು ಪಂಚಾಯ್ತ್ ರಾಜ್ ಇಲಾಖೆಯವರು ನಮೂನೆ 11-ಬಿ ಯಲ್ಲಿ ನಮೂದು ಮಾಡಿರುತ್ತಾರೆ ಎಂದರೆ ನಾನು ತಿಳಿದುಕೊಂಡಿರುವುದಿಲ್ಲ. ಹೆಚ್ಚುವರಿಯಾಗಿ ಕಟ್ಟಿರುವ ಕಾಲೇಜು ಕಟ್ಟಡ ವಿಸ್ತೀರ್ಣ ಪೂರ್ವ ಪಶ್ಚಿಮ 8.8392 * ಉತ್ತರ ದಕ್ಷಿಣ 5.7912 ಮೀ ಇರುತ್ತದೆ ಎಂದರೆ ಸಾಕ್ಷಿಯು ಹೆಚ್ಚುವರಿಯಾಗಿ ಕಾಲೇಜು ಕಟ್ಟಡ ಕಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಹೆಚ್ಚುವರಿಯಾಗಿ ಕಟ್ಟಿರುವ ಕಾಲೇಜು ಕಟ್ಟಡದ ಪೂರ್ವಕ್ಕೆ ಸಂಸ್ಥೆಯ ಖಾಲಿ ಇರುವ ಕಟ್ಟಡ ಎಂದರೆ ಸಾಕ್ಷಿಯು ಹೆಚ್ಚುವರಿಯಾಗಿ ಕಟ್ಟಡ ಕಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಪಶ್ಚಿಮಕ್ಕೆ ವಿದ್ಯಾರ್ಥಿನಿಲಯ, ವಿದ್ಯಾರ್ಥಿನಿಲಯಕ್ಕೆ ಓಡಾಡುವ ರಸ್ತೆ ಇರುತ್ತದೆ ಎಂದರೆ ಇರುವುದಿಲ್ಲ. ಉತ್ತರಕ್ಕೆ ಸಂಸ್ಥೆಗೆ ಓಡಾಡುವ ದಾರಿ ಹಾಗೂ ಸುಭಾಷ್ ರವರ ಜಮೀನು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ವಿದ್ಯಾರ್ಥಿಗಳು ಓಡಾಡುವ ದಾರಿ ಎಂದರೆ ಸರಿಯಲ್ಲ.

2006-2013 ನೇ ಸಾಲಿನವರೆಗೆ ನಾನು ಕಾರ್ಯಕಾರಿಣಿ ಸದಸ್ಯೆಯಾಗಿದ್ದು, 2013 ರ ಈಚೆಗೆ ಭಾರತ್ ಯುನಿವರ್ಸೆಲ್ ಸೊಸೈಟಿಯವರು ಯಾವುದೇ ಕಟ್ಟಡ ಕಟ್ಟಿರುವುದಿಲ್ಲ ಎಂದರೆ ಹೌದು. 4 ಗುಂಟೆ ಪ್ರದೇಶದಲ್ಲಿ ಕಟ್ಟಿರುವ ಕಟ್ಟಡ, ಹಾಗೂ ಹೆಚ್ಚುವರಿ ಸ್ಥಳದಲ್ಲಿ ಕಟ್ಟಿರುವ ಕಟ್ಟಡ ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿ (ರಿ) ಬೆಂಗಳೂರು ರವರ ಕಾರ್ಯದರ್ಶಿಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ಅನ್ಯ ಸಂಕ್ರಮಣವಗಿರುವ 4 ಗುಂಟೆ ಸ್ಥಳದಲ್ಲಿ ಇರುವಂತಹ ಕಟ್ಟಡದಲ್ಲಿ ಪಾಲು ಬರಬೇಕೆಂದು

ನಾನು ದಾವೆಯನ್ನು ಹೂಡಿರುತ್ತೇನೆ. ಇ ಸ್ವತ್ತಿನ ತಂತ್ರಾಂಶ 151600700200500472 ರಂತೆ ಹಾಸ್ಟೆಲ್ ಬಿಲ್ಡಿಂಗ್‌ನ ಕಟ್ಟಡ ಖಾತೆಯು ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಕಟ್ಟಡವೇ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಕಟ್ಟಡ ಇರುವ ಬಗ್ಗೆ ಪಂಚಾಯ್ತ್ ರಾಜ್ ಇಲಾಖೆಯವರು ನಮೂನೆ 11-ಬಿ ನಂತೆ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಸ್ಟೆಲ್ ಕಟ್ಟಡ ಇ ಸ್ವತ್ತಿನ ತಂತ್ರಾಂಶದ ಖಾತೆಯಂತೆ ಪೂರ್ವ ಪಶ್ಚಿಮ 7.9248 * ಉತ್ತರ ದಕ್ಷಿಣ 46.0248 ಮೀಟರ್‌ನಂತೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇ ಸ್ವತ್ತಿನಲ್ಲಿ ಹಾಸ್ಟೆಲ್ ಕಟ್ಟಡದ ಪೂರ್ವಕ್ಕೆ ಉತ್ತರಕ್ಕೆ ಸಂಸ್ಥೆಯ ಹಾಲಿ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಟ್ಟಡವೇ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಹಾಸ್ಟೆಲ್ ಕಟ್ಟಡದ ಪಶ್ಚಿಮಕ್ಕೆ ಸಂಸ್ಥೆಯ ಆಟದ ಮೈದಾನ ಮತ್ತು ತೋಟ ಇದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉತ್ತರಕ್ಕೆ ವಿಧ್ಯಾರ್ಥಿಗಳು ಓಡಾಡುವ ರಸ್ತೆ, ಹಾಗೂ ಸುಭಾಷ್ ರವರ ಜಮೀನು ಇರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ವಿದ್ಯಾರ್ಥಿಗಳು ಓಡಾಡುವ ರಸ್ತೆ ಹಾಗೂ ಆಟದ ಮೈದಾನ ಇರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಓ.ಎಸ್. 1/2016 ರ ಪ್ರಕರಣದಲ್ಲಿ ಸರ್ವೆ ನಂಬರ್ 43/2 ರ ಹೊಸ ಸಂಖ್ಯೆ 43/15 ರಲ್ಲಿ 1 ಎಕರೆ 36 ಗುಂಟೆ ಸ್ವತ್ತಿಗೆ ಹಕ್ಕು ಘೋಷಣೆಯನ್ನು ಕೋರಿರುತ್ತೇನೆ. ಓ.ಎಸ್. 1/2016 ರ ಪ್ರಕರಣದಲ್ಲಿ 4 ಗುಂಟೆ ಪ್ರದೇಶವನ್ನು ಹೊರತುಪಡಿಸಿ ಹೆಚ್ಚುವರಿ ಪ್ರದೇಶದಲ್ಲಿ ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್ ಇರುತ್ತದೆ ಎಂದರೆ ಸರಿಯಲ್ಲ.

ಭಾರತ್ ಯುನಿವರ್‌ಸೆಲ್ ಎಜುಕೇಷನ್ ಸೊಸೈಟಿಯವರು ಸಂಸ್ಥೆಯ ಕಟ್ಟಡಗಳಿಗೆ ವಾರ್ಷಿಕವಾಗಿ ಪಂಚಾಯ್ತ್ ರಾಜ್ ಇಲಾಖೆಗೆ 70 ಸಾವಿರ ರೂಗಳನ್ನು ಕರ ಪಾವತಿ

ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕಾಲೇಜು ಕಟ್ಟಡ, ಹೆಚ್ಚುವರಿ ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್‌ಗೆ ಸಂಬಂಧಿಸಿದಂತೆ ಹಳ್ಳಿಮೈಸೂರು ಗ್ರಾಮ ಪಂಚಾಯ್ತಿಯವರು ನಕ್ಷೆಯನ್ನು ಅನುಮೋದಿಸಿ ಲೈಸೆನ್ಸ್ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 4 ಗುಂಟೆ ಕಟ್ಟಡಕ್ಕೆ ಮಾತ್ರ ಅನುಮೋದನೆ ನೀಡಿ ಲೈಸೆನ್ಸ್ ನೀಡಿರುವುದಾಗಿ ಉತ್ತರಿಸುತ್ತಾರೆ . ಕಟ್ಟಡಗಳನ್ನು ಕಾನೂನು ಬದ್ಧವಾಗಿ ಕಟ್ಟಲಾಗಿದೆ ಎಂದು ಶಾಖಾಧಿಕಾರಿಗಳು ಪಂಚಾಯ್ತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಹೊಳೆನರಸೀಪುರ ರವರು ಕಟ್ಟಡ ಕಾಮಗಾರಿ ಮುಕ್ತಾಯದ ಧೃಢೀಕರಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಓ.ಎಸ್. 1/2016 ರ ಪ್ರಕರಣದಲ್ಲಿನ ಸ್ವತ್ತುಗಳಲ್ಲಿ ಹೆಚ್ಚುವರಿ ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್ ಕಟ್ಟಡವನ್ನು ಮುಚ್ಚಿಟ್ಟು ಕೇವಲ ಸರ್ವೆ ನಂಬರ್ ಅನ್ನು ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಮೃತ ರೇಣುಕಾರಾಧ್ಯ ರವರು ನನ್ನ ಪತಿ ಕೆ.ವಿ. ಮಂಜುನಾಥ್ ಹಾಗೂ ಶಂಭುಲಿಂಗಪ್ಪರವರಿಗೆ ಜಿಪಿಎ ಬರೆದುಕೊಟ್ಟಿದ್ದರು ಎಂದರೆ ಹೌದು. ಸದರಿ ಜಿಪಿಎ ಅನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆಯವರು ಬರೆದುಕೊಟ್ಟಂತಹ ಜಿಪಿಎ 3 ನೇ ಪುಟದಲ್ಲಿ ಭಾರತ್ ಯುನಿವರ್‌ಸೆಲ್ ಶಿಕ್ಷಕರ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ, ಆಟದ ಮೈದಾನ ಅಥವಾ ಕಾಲೇಜಿನ ಹಿತದೃಷ್ಠಿಯಿಂದ ಅಭಿವೃದ್ದಿ ಕಾರ್ಯ ನಡೆಸಲು ಎಂದು ಬರೆದಿರುತ್ತದೆ ಎಂದರೆ ಹೌದು. ಸದರಿ ಜಿಪಿಎ ಅನ್ನು ಉಪನೋಂಧಾಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿರುತ್ತಾರೆ ಎಂದರೆ ಹೌದು. ನನ್ನ ತಂದೆ ಜೀವಿತ ಕಾಲದಲ್ಲಿ ಮೇಲೆ ಹೇಳಿದಂತಹ ಜಿಪಿಎ ಅನ್ನು ನನ್ನ ತಂದೆಯವರು ರದ್ದುಪಡಿಸಿರುತ್ತಾರೆ. ಜಿಪಿಎ ಅನ್ನು ರದ್ದುಪಡಿಸಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ನೀಡಬಲ್ಲೆ. ನನ್ನ ತಂದೆ ಮೃತಪಡುವ ಮೊದಲು ನಾನು ಹಾಗೂ ನನ್ನ ತಂದೆ ಅವಿನಭಾವ ಸಂಬಂಧ ಹೊಂದಿದ್ದೇವು

ಎಂದರೆ ಹೌದು. ನನ್ನ ತಂದೆಯವರು ಮಾಡುತ್ತಿದ್ದಂತಹ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ಜಿಪಿಎ ಎಲ್ಲಿ ನೋಂದಣಿ ಮಾಡಲಾಗಿರುತ್ತದೋ ಸದರಿ ಕಚೇರಿಯಲ್ಲಿಯೇ ಸದರಿ ಜಿಪಿಎ ಅನ್ನು ರದ್ದುಪಡಿಸಬೇಕೆಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ಸ್ವತ್ತುಗಳನ್ನು ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿರವರು ಅಬಾದಿತವಾಗಿ ಅನುಭವಿಸಬೇಕೆಂಬ ಉದ್ದೇಶವಿದ್ದ ಕಾರಣ ನನ್ನ ತಂದೆಯವರ ಜೀವಿತ ಕಾಲದಲ್ಲಿ ಜಿಪಿಎ ಅನ್ನು ರದ್ದುಪಡಿಸಲಿಲ್ಲ ಎಂದರೆ ಸರಿಯಲ್ಲ. ಸ.ನಂ. 43/1 ರಲ್ಲಿ 10 ಗುಂಟೆ, ಸ.ನಂ. 43/2 ರಲ್ಲಿ 1 ಎಕರೆ 10 ಗುಂಟೆ ಸ್ವತ್ತನ್ನು ಜಿಪಿಎನಲ್ಲಿ ಅನುಸೂಚಿತ ಸ್ವತ್ತುಗಳಾಗಿ ನಮೂದು ಮಾಡಿರುತ್ತಾರೆ ಎಂದರೆ ಹೌದು.

ನನ್ನ ತಂದೆಯವರು ವಿಶೇಷ ಮುಕ್ತಿಯಾರ್ ನಾಮೆಯನ್ನು ಬರೆದು ಸದರಿ ಮುಕ್ತಿಯಾರ್ ನಾಮೆಯನ್ನು ನೋಂದಾಯಿಸಿದ್ದರು ಎಂದರೆ ಹೌದು. ಸದರಿ ಮುಕ್ತಿಯಾರ್ ನಾಮೆಯನ್ನು ವೈಯಕ್ತಿವಾಗಿ ಮಂಜುನಾಥ್ ರವರ ಹೆಸರಿಗೆ ಬರೆಯಲಾಗಿತ್ತು. ಆದರೆ ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿ ಪರವಾಗಿ ಬರೆದಿರಲಿಲ್ಲ. ನನ್ನ ತಂದೆಯವರು ವಿಶೇಷ ಮುಕ್ತಿಯಾರ್ ನಾಮೆಯಲ್ಲಿ ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಪ್ರಾಂಶುಪಾಲರಾದ ಮಂಜುನಾಥ್ ರವರಿಗೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಪದನಾಮವನ್ನು ಮಾತ್ರ ಬರೆಯಲಾಗಿದ್ದು, ಸೊಸೈಟಿಯ ಪರವಾಗಿ ಬರೆಯಲಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಶೇಷ ಮುಕ್ತಿಯಾರ್ ನಾಮೆಯಲ್ಲಿ ಜಮೀನು ಅನ್ಯ ಸಂಕ್ರಮಣವಾದ ನಂತರ ಕಟ್ಟಡ ಕಟ್ಟಲು, ಶಿಕ್ಷಕರ ತರಬೇತಿ ಕಾಲೇಜಿನ ಕಟ್ಟಡ ನಿರ್ಮಾಣ ಮಾಡಲು ಹಾಗೂ ಇದರ ಮೇಲುಸ್ತುವಾರಿ ವಹಿಸಲು ಎಂದು ಬರೆಯಲಾಗಿದೆ ಎಂದರೆ ಹೌದು. ವಿಶೇಷ ಮುಕ್ತಿಯಾರ್ ನಾಮೆಯಲ್ಲಿ ಹಳ್ಳಿಮೈಸೂರು ಗ್ರಾಮದ ಸ.ನಂ. 43/2 ರ 36 ಗುಂಟೆ ಸ್ವತ್ತನ್ನು ಅನುಸೂಚಿ ಸ್ವತ್ತಾಗಿ ಸೂಚಿಸಲಾಗಿರುತ್ತದೆ ಎಂದರೆ ಹೌದು.

4 ಗುಂಟೆ ಪ್ರದೇಶವನ್ನು ಸ.ನಂ. 43/2 ರ ಎರಡು ಎಕರೆ ಪ್ರದೇಶದಲ್ಲಿ ಅನ್ಯ ಸಂಕ್ರಮಣ ಮಾಡಲಾಗಿರುತ್ತದೆ . ನನ್ನ ತಂದೆಯವರು ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿ ರವರಿಗೆ ಜಮೀನುಗಳನ್ನು ಅನ್ಯ ಸಂಕ್ರಮಣ ಮಾಡಿಸಲು ಕಟ್ಟಡ ಕಟ್ಟಿಸಲು ಅಭಾದಿತವಾದಂತಹ ಅನುಮತಿಯನ್ನು ನೀಡಿದ್ದು, ಅದರಲ್ಲಿ 4 ಗುಂಟೆಯನ್ನು ಮಾತ್ರ ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿರವರು ಅನ್ಯ ಸಂಕ್ರಮಣ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅನ್ಯ ಸಂಕ್ರಮಣವನ್ನು ರೇಣುಕರಾಧ್ಯರವರೇ ಮಾಡಿಸಿ ಮಂಜುನಾಥ್ ಹಾಗೂ ಶಂಭುಲಿಂಗಪ್ಪನವರಿಗೆ ಹಸ್ತಾಂತರಿಸಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಕೋರಿಕೆ ಮೇರೆಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ